# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:07/**04/2021** ರಂದು **ಮಧ್ಯಾಹ್ನ:2.30** ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೇಗೂರು ವಾರ್ಡ್ ಸಂಖ್ಯೆ-192 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಸಮ್ಮುಖದಲ್ಲಿ ಅವರ ಅಧ್ಯಕ್ಷತೆಯೊಂದಿಗೆ ಬೇಗೂರು ಉಪ-ವಿಭಾಗದ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಚಲುವರಾಜು.ಎಸ್. ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-192 ಬೇಗೂರು ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವ ಬಗ್ಗೆ.
2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವ ಬಗ್ಗೆ.
3. ಕುಡಿಯುವ ನೀರು ಸರಬರಾಜು ಬಗ್ಗೆ,
4. ಘನತ್ಯಾಜ್ಯ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡುವ ಬಗ್ಗೆ,
5. ವಾರ್ಡ್‌ನ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ,
6. ಬೀದಿ ದೀಪಗಳ ನಿರ್ವಹಣೆಯ ಬಗ್ಗೆ,
7. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ,

**ವಾರ್ಡ್ ನಂ-192 ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಸೂಚಿಸಿರುವವರ ವಿವರ**

| ಕ್ರ.ಸಂ | ಹೆಸರು | ಹುದ್ದೆ | ಹಾಜರಾತಿ |
|---|---|---|---|
| 1 | ಶ್ರೀ.ನೀಲಕಂಠಯ್ಯ.ಕೆ.ಪಿ. | ಅಧ್ಯಕ್ಷರು/ನೋಡೆಲ್ ಅಧಿಕಾರಿಗಳು | ಹಾಜರಾಗಿರುತ್ತಾರೆ |
| 2 | ಶ್ರೀ.ಚಲುವರಾಜು.ಎಸ್. | ಕಾರ್ಯದರ್ಶಿ (ಕಿ.ಅ.) | ಹಾಜರಾಗಿರುತ್ತಾರೆ |
| 3 | ಶ್ರೀ.ಶ್ರೀಧರ್.ಎಸ್. | ಹಿ.ಆ.ಪ | ಹಾಜರಾಗಿರುತ್ತಾರೆ |
| 4 | ಶ್ರೀ.ಆರ್.ಕುಮಾರ್ | ಬೆಸ್ಕಾಂ. ಸ.ಕಾ.ಅ. | ಹಾಜರಾಗಿರುತ್ತಾರೆ |
| 5 | ಶ್ರೀಮತಿ.ವಿನಯಕುಮಾರಿ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 6 | ಶ್ರೀ.ರಮೇಶ್ | ಸ.ಕಾ.ಅ. ಬೀದಿ ದೀಪ ಇಲಾಖೆ | ಹಾಜರಾಗಿರುತ್ತಾರೆ |
| 7 | ಶ್ರೀ.ಸಂತೋಷ್ ದೀಪು | ಅರಣ್ಯ | ಹಾಜರಾಗಿರುತ್ತಾರೆ |
| 8 | ಶ್ರೀ.ಮಂಜುನಾಥ್ | ಸರ್ಕಲ್ ಇನ್ಸ್‌ಪೆಕ್ಟರ್, ಬೇಗೂರು | ಗೈರುಹಾಜರು |
| 9 | ಶ್ರೀ.ಬಾಲಾಜಿ | ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | ಹಾಜರಾಗಿರುತ್ತಾರೆ |
| 10 | ಶ್ರೀ.ರಮೇಶ್ | ಸ.ಕಾ.ನಿ.ಅ. (ರ.ಮು.ಸೌ) | ಹಾಜರಾಗಿರುತ್ತಾರೆ |

Scanned with CamScanner

| | | | |
|---|---|---|---|
| 11 | ಶ್ರೀ.ರಮೇಶ್.ಎಲ್. | ಕಿ.ಆ.ಪ. | ಹಾಜರಾಗಿರುತ್ತಾರೆ |
| 12 | ಶ್ರೀ.ರವಿ | ಬೀದಿ ದೀಪ ನಿರ್ವಹಣೆ | ಗೈರುಹಾಜರು |
| 13 | ಶ್ರೀ.ನರಸಪ್ಪ | ತೋಟಗಾರಿಕೆ ಇಲಾಖೆ | ಗೈರುಹಾಜರು |
| 14 | ಶ್ರೀ.ರಂಗಪ್ಪ ಸ.ಅ. | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಗೈರುಹಾಜರು |
| 15 | ಶ್ರೀ.ರಮೇಶ್ | ಸದಸ್ಯರು | ಹಾಜರಾಗಿರುತ್ತಾರೆ |
| 16 | ಶ್ರೀ.ಎಸ್.ಸಚಿನ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 17 | ಶ್ರೀ.ಕೃಷ್ಣ.ಎನ್. | ಡಿ.ಎಸ್.ಎಸ್.(ವರದಿಗಾರರು) | ಹಾಜರಾಗಿರುತ್ತಾರೆ |
| 18 | ಶ್ರೀ.ಮಹೇಶ್ ಚಂದ್ರ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 19 | ಶ್ರೀ.ಶಿವಕುಮಾರ್.ಎ.ಪಿ. | ಸಹಾಯಕ ಅಭಿಯಂತರರು | ಹಾಜರಾಗಿರುತ್ತಾರೆ |
| 20 | ಶ್ರೀ.ಡಿ.ಸುಂದರಯಯ | ಸಹಾಯಕ ಕಾರ್ಯಪಾಲಕ ಅಭಿಯಂತರರು | ಹಾಜರಾಗಿರುತ್ತಾರೆ |
| 21 | ಶ್ರೀ.ವೇಣುಗೋಪಾಲ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |

## ಸಭೆಯ ನಡಾವಳಿಗಳು

1. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕೋವಿಡ್-19 ಮಹಾಮಾರಿ ಸಾಂಕ್ರಾಮಿಕ ರೋಗ 2ನೇ ಹಂತದಲ್ಲಿ ಹರಡುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ವಾರ್ಡ್ ವ್ಯಾಪ್ತಿಯಲ್ಲಿ 60 ವರ್ಷ ಮೇಲ್ಪಟ್ಟ ಸಾರ್ವಜನಿಕರು ಹಾಗೂ ಬಿ.ಪಿ & ಶುಗರ್ ಇರುವಂತಹ 45 ರಿಂದ 59 ವರ್ಷದ ಸಾರ್ವಜನಿಕರಿಗೆ ಕೋವಿಡ್ ವ್ಯಾಕ್ಸಿನ್ ಚುಚುಮದ್ದು ನೀಡಲು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸೂಚಿಸಿದರು.

2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವಂತೆ ಅಧ್ಯಕ್ಷರು ವೈದ್ಯಾಧಿಕಾರಿರವರಿಗೆ ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಸೂಚಿಸಿದರು
ಕ್ರಮ: ವೈದ್ಯಾಧಿಕಾರಿಗಳು, ಬೇಗೂರು, ಪ್ರಾಥಮಿಕ ಆರೋಗ್ಯ ಕೇಂದ್ರ.

3. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಈ ಬಗ್ಗೆ ದೂರು ಬರದಿರುವಂತೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ನೀರು ಸರಬರಾಜು ಗುತ್ತಿಗೆದಾರರನ್ನು ಕರೆದು ಸೂಚನೆ ನೀಡುವಂತೆ ಹಾಗೂ ವಾಟರ್‌ಮ್ಯಾನ್‌ಗಳು ಪ್ರತಿದಿನ ಈ ಬಗ್ಗೆ ವರದಿಯನ್ನು ವಾರ್ಡ್‌ನ ಸಹಾಯಕ ಅಭಿಯಂತರರು ಪಡೆಯುವಂತೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192

Scanned with CamScanner

4. ಸದರಿ ವಾರ್ಡ್‌ನ ಪರಿವೀಕ್ಷಣಾ ಸಮಯದಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಹಾಗೂ ದೈನಂದಿನ ಕಸ ಸಂಗ್ರಹಣೆ ಮಾಡದಿರುವ ಬಗ್ಗೆ ಹಾಗೂ ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಹಾಗೂ ಘನತ್ಯಾಜ್ಯದ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡಲು ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣಾ ಘಟಕ)

5. ಸಾರ್ವಜನಿಕರ ಕುಂದು ಕೊರತೆಗಳಲ್ಲಿ ಅಕ್ಷಯನಗರ ಪೂರ್ವ ಭಾಗದ ಸಾರ್ವಜನಿಕರು ರಸ್ತೆಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಾಗಿದ್ದಂತಹ ಶ್ರೀ.ಸಿದ್ದಪ್ಪ.ಎಸ್.ಸಿ. ಮತ್ತು ಇತರರು ಕೋರಿದ್ದು ಈ ಬಗ್ಗೆ ಕ್ರಮವಹಿಸುವಂತೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192 ರವರು ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

7. ವಾರ್ಡ್ ವ್ಯಾಪ್ತಿಯಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಗುರುತಿಸಿ ಮುಚ್ಚುವ ಕಾರ್ಯವನ್ನು ಮುಂದುವರೆಸಲು ಸಾರ್ವಜನಿಕರು ಕೋರಿಕೊಂಡಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

8. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ದೇಶಿತ ಆರೋಗ್ಯಮಾತೆ ಮೀನುಗಾರರ ಮಹಿಳಾ ಸಹಕಾರ ಸಂಘವನ್ನು ಸ್ಥಾಪಿಸಲು ಮತ್ತು ಬಸಾಪುರ ಪ್ಯಾರಡೈಸ್ ಅಪಾರ್ಟ್‌ಮೆಂಟ್ ಹತ್ತಿರದ ಕೆರೆ, ಬೆರಟೇನ ಅಗ್ರಹಾರ ಕೆರೆಯಲ್ಲಿ ಮೀನುಗಾರಿಕೆ ಸಾಗಾಣಿಕೆ ಮಾಡಲು ಆಕ್ಷೇಪಣೆ ಇರುವುದಿಲ್ಲವೆಂದು ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

9. ಒಳಚರಂಡಿ ನಿರ್ವಹಣೆ ವ್ಯವಸ್ಥೆಯನ್ನು ಪಾಲಿಕೆಯ ವತಿಯಿಂದ ನಿರ್ವಹಿಸುತ್ತಿರುವುದರಿಂದ ಪ್ರತಿ ಸೋಮವಾರ ಮತ್ತು ಬುಧವಾರ ಜಟಿಂಗ್ ಮಿಷನ್ ವಾಹನವನ್ನು ಬೇಗೂರು ವಾರ್ಡ್‌ಗೆ ವಾರದಲ್ಲಿ 2 ದಿನ ಕಳುಹಿಸಿಕೊಡಬೇಕೆಂದು ಪತ್ರ ಬರೆಯಲು ಸಭೆಯಲ್ಲಿ ಹಾಜರಾಗಿದ್ದಂತಹ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

10. ವಾರ್ಡ್‌ನಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಲು ಸದರಿ ಕಾಮಗಾರಿಗಳ ಗುತ್ತಿಗೆದಾರರನ್ನು ಕರೆದು ಸಭೆ ನಡೆಸಿ ಅತೀ ಜರೂರಾಗಿ ಕಾರ್ಯನಿರ್ವಹಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

Scanned with CamScanner

11. ಮಳೆಗಾಲವು ಪ್ರಾರಂಭವಾಗುತ್ತಿರುವುದರಿಂದ ತಾತ್ಕಾಲಿಕ ನಿಯಂತ್ರಣಾ ಕೋಠಡಿ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಗೂರು ಉಪವಿಭಾಗ ರವರಿಗೆ ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

12. ಕೋವಿಡ್-19 ಮಹಾಮಾರಿ ಸಾಂಕ್ರಾಮಿಕ ರೋಗ 2ನೇ ಹಂತದಲ್ಲಿ ಹರಡುತ್ತಿದ್ದು, ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ಆಟೋ ಬಳಸಿಕೊಂಡು ಮೈಕ್ ಮುಖಾಂತರ ಸಾರ್ವಜನಿಕರಿಗೆ ಜಾಗೃತಿ ಮೂಡಿಲು ಸಭೆಯಲ್ಲಿ ಹಾಜರಿದ್ದಂತಹ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

13. ಮಳೆಗಾಲ ಫ್ರಾರಂಭವಾಗುತ್ತಿರುವುದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಅಗೆದು ದುರಸ್ಥಿಗೊಳಿಸಿದ್ದು, ರಸ್ತೆಯ ಪಕ್ಕದ ಚರಂಡಿಗಳಲ್ಲಿ ತುಂಬಿರುವ ಹೆಚ್ಚುವರಿ ಮಣ್ಣನ್ನು ತೆಗೆದು ಮಳೆಯ ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯುವಂತೆ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅನುಕೂಲ ಮಾಡಿಕೊಡಬೇಕಾಗಿ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

<u>ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.</u>

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ -192 ಬೇಗೂರು

7/4/2021
ಅಧ್ಯಕ್ಷರು
ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ-192, ಬೇಗೂರು

**ಪ್ರತಿಗಳು:-**

1) ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ,
2) ಉಪ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ,
3) ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ಉಪವಿಭಾಗ ರವರ ಅವಗಾಹನೆಗೆ,
4) ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ ರವರ ಅವಗಾಹನೆಗೆ,
5) ಕಛೇರಿ ಕಡತಕ್ಕೆ

Scanned with CamScanner